ಅವರು ಸ್ಥಳಕ್ಕೆ ಬೇಟಿ ನೀಡಿ ಕ್ರಮ ಜರುಗಿಸಿರುತ್ತಾರೆ. ಈ ಪ್ರಕರಣಗಳ ತನಿಖೆಯನ್ನು ಕುಂದಾಪುರ ವೃತ್ತ ನಿರೀಕ್ಷಕರು ನಡೆಸುತ್ತಿರುತ್ತಾರೆ. ಆರೋಪಿಗಳ ಪತ್ತೆಗಾಗಿ ವಿಶೇಷ ದಳವನ್ನು ರಚಿಸಿ, ಪತ್ತೆ ಕಾರ್ಯವನ್ನು ಕ್ಷಿಪ್ರಗತಿಯಲ್ಲಿ ಮುಂದುವರೆಸಿರುತ್ತಾರೆ. ಈ ಪ್ರಕರಣದ ತನಿಖೆಯನ್ನು ಆಧ್ಯತೆಯ ಮೇರೆಗೆ ನಡೆಸುತ್ತಿದ್ದು, ಎಲ್ಲಾ ಆರೋಪಿಗಳನ್ನು ಪತ್ತೆ ಹಚ್ಚಲು ಸರ್ವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಈ ಕೊಲೆಗೆ ಹಳೆಯ ದ್ವೇಷ ಮತ್ತು ವೈಷಮ್ಯವೇ ಕಾರಣವಾಗಿರುತ್ತದೆ. ಬೆಳ್ಳೆ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಪೋಲೀಸ್ ಬಂದೋಬಸ್ತ್ ವಿಧಿಸಲಾಗಿದೆ.

ಮಾನ್ಯ ಅಧ್ಯಕ್ಷರೇ, ಇದೂ ಅಲ್ಲದೆ, ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರು ಕೇಂದ್ರ ಸರ್ಕಾರದ ಸಿ.ಬಿ.ಐ.ಗೆ ಈ ಕೊಲೆ ಪ್ರಕರಣವನ್ನು ತನಿಖೆಗೆ ಕೊಡಬೇಕು ಅವರ ಮುಖಾಂತರ ವಿಚಾರಣೆ ಆಗಬೇಕು ಎನ್ನುವಂಥದ್ದನ್ನು ಒತ್ತಾಯ ಮಾಡಿದ್ದಾರೆ. ನಾನು ಅವರಿಗೆ ಭರವಸೆ ಕೊಡುತ್ತೇನೆ ನಾನು ಯಾರ ಮೇಲೂ ರೋಷ ದೊಡ್ಡವರಾಗಿರಲಿ, ಯಾವುದೇ ಪಕ್ಷದವರಾಗಲಿ, ಅವರನ್ನು ವಿಚಾರಣೆ ಮಾಡಿ ತಪ್ಪು ಮಾಡಿದ್ದಾರೆ ಎಂದು ಕಂಡು ಬಂದರೆ ಅವರಿಗೆ ಶಿಕ್ಷೆ ಮಾಡುವುದು ಸರ್ಕಾರದ ಕರ್ತವ್ಯವಾಗುತ್ತದೆ. ಈ ಕರ್ತವ್ಯದಲ್ಲಿ ನಾವು ಹಿಂದೆ ಬೀಳುವುದಿಲ್ಲ. ಅವರು ರಕ್ಷಣೆಯನ್ನು ಕೇಳಿಲ್ಲ, ಆದರೆ ಒಂದು ಭರವಸೆಯನ್ನು ಕೊಡುತ್ತೇನೆ, ಮೇಲ್ನೋಟಕ್ಕೆ ಇದು ಎರಡು ಗುಂಪಿನ ಮಧ್ಯೆ ಇರತಕ್ಕಂತಹ ದ್ವೇಷದಿಂದ ಆಗಿರತಕ್ಕಂಥದ್ದು. ಸಾಕ್ಷಿ ಹೇಳಲು ಯಾರೂ ಸಹಿತ ಮುಂದೆ ಬರುತ್ತಿಲ್ಲ. ಅವರು ನಮ್ಮ ಮೇಲೆ ವಿಶ್ವಾಸ ಇಡಲಿ. ನಾನು ಇದರ ಬಗ್ಗೆ ಖುದ್ದಾಗಿ ಉನ್ನತ ಪೋಲೀಸ್ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಸಿ.ಐ.ಡಿ.ಗೆ ಕೊಡಬೇಕೋ ಅಥವಾ ಸಿ.ಬಿ.ಐ.ಗೆ ಕೊಡಬೇಕೋ ಎನ್ನುವುದನ್ನು ಪರಿಶೀಲನೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತೇನೆ.

**ಮುರದ್-ಸರ್ವೋದಯ ಶಿಕ್ಷಣ ಟ್ರಸ್ಟಿನ ಡಿಯಲ್ಲಿ ನಡೆಯುತ್ತಿರುವ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಂದನೆ.**

ಶ್ರೀ ಅಂಬಡಗಟ್ಟಿ ಎಸ್. ರುದ್ರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಅಂದರೆ 3ನೇ ಏಪ್ರಿಲ್ 1995ರಂದು ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಯುತ್ತಾ ಇದೆ. ಧಾರವಾಡದ ತಾಲ್ಲೂಕಿನ ಮುರದ್ ಎಂಬ ಗ್ರಾಮದಲ್ಲಿ ಸರ್ವೋದಯ ಶಿಕ್ಷಣ ಟ್ರಸ್ಟ್ ಎಂದು ನಡೆಯುತ್ತಿರುವ ಪ್ರೌಢಶಾಲೆಯಲ್ಲಿ 16 ಜನ ವಿದ್ಯಾರ್ಥಿಗಳು ಫೀ ಕಟ್ಟಿ ಫಾರಂ ತುಂಬಿದ್ದರೂ ಕೂಡ ಆ ಶಾಲೆಯ ಸಿಬ್ಬಂದಿ ವರ್ಗದ ತಪ್ಪಿನಿಂದಾಗಿ ಅವರು ಪರೀಕ್ಷೆಗೆ ಕೂರಲಿಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬಂದಿದೆ. ನಿನ್ನೆ ನಾನು ಫೋನ್ ಮುಖಾಂತರ ಸಂಸ್ಥೆಯ ಮುಖ್ಯಸ್ಥರನ್ನು ಸಂಪರ್ಕ ಮಾಡಿದ್ದೆ. ಆದಕ್ಕೆ ಅವರು ಸಿಬ್ಬಂದಿ ತಪ್ಪಿನಿಂದಾಗಿ ಫೀಯನ್ನು ಪ್ರೌಢ ಶಿಕ್ಷಣ ಪರೀಕ್ಷಾ ಸಂಸ್ಥೆಗೆ ಕಟ್ಟಲಾಗಲಿಲ್ಲ. ಆ ಕಾರಣಕ್ಕಾಗಿ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಕುಳಿತುಕೊಳ್ಳವ ಅವಕಾಶದಿಂದ ವಂಚಿತರಾಗಿರುವುದು ನಿಜ ಎಂದು ಅವರು ಒಪ್ಪಿಕೊಂಡಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುವುದು ಇಷ್ಟೆ. ಈ ತಪ್ಪಿಗೆ ಯಾರು ಹೊಣೆಗಾರರೋ ಅವರಿಗೆ ಶಿಕ್ಷೆಯಾಗಬೇಕು ಮತ್ತು ಆ 16 ಜನ ವಿದ್ಯಾರ್ಥಿಗಳಿಗೆ ಈ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆ ಕೂತುಕೊಳ್ಳುವಂಥ ವಿಶೇಷ ವ್ಯವಸ್ಥೆಯನ್ನು ಮಾಡಬೇಕು. ಒಂದು ವರ್ಷದ ಜೀವನ ಹಾಳಾಗುವುದನ್ನು ತಪ್ಪಿಸಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳತ್ತೇನೆ.

ಶ್ರೀ ಸಿ. ಬೈರೇಗೌಡ : ಈ ಘಟನೆ ನಡೆದಿರತಕ್ಕದ್ದು ನಿಜವೇ ಆಗಿದ್ದರೆ, ಇದು ಅಕ್ಷಮ್ಯ ಅಪರಾಧ ಎಂದು ಸರ್ಕಾರದ ಭಾವನೆ. ಸಂಬಂಧಪಟ್ಟ ಮಾನ್ಯ

ಮಂತ್ರಿಗಳು ಈಗ ಇಲ್ಲಿ ಇಲ್ಲ. ಅವರ ಗಮನಕ್ಕೆ ತಕ್ಷಣ ಇದನ್ನು ತಂದು ಈ ಘಟನೆಗೆ ಕಾರಣರಾದ ಸಂಬಂಧಪಟ್ಟಂತಹ ಅಧಿಕಾರಿಗಳ ವಿರುದ್ಧ ಕ್ರಮತೆಗೆದುಕೊಳ್ಳವುದು ಅಲ್ಲದೆ, ಇಂಥ ಘಟನೆ ಇನ್ನು ಮುಂದೆ ಆಗದಂತೆ ವ್ಯವಸ್ಥೆ ಮಾಡಲು ಹೇಳುತ್ತೇನೆ. ಅದನ್ನು ಕೇಳಿ ನನಗೂ ದುಃಖವಾಗುತ್ತದೆ. ಏಕೆಂದರೆ ಇದು ಮಕ್ಕಳ ತಪ್ಪಲ್ಲ.

ಅಧ್ಯಕ್ಷರು : Alternative ವ್ಯವಸ್ಥೆ ಮಾಡಬೇಕು.

(ಗೊಂದಲ)

ನಿಮ್ಮ ಪರವಾಗಿ ನಾನೇ ಆ ಕೆಲಸಮಾಡಿದ್ದೇನೆ.

ಶ್ರೀ ಸಿ. ಬೈರೇಗೌಡ : ಈ ವಿಚಾರದಲ್ಲಿ ನಾನು ಏನೂ ಹೇಳುವುದಿಲ್ಲ, ಸಂಬಂಧಪಟ್ಟ ಮಂತ್ರಿಗಳ ಜೊತೆಗೆಯಲ್ಲಿ ಮಾತನಾಡಿ ಲೋಪ ಆಗಿದ್ದರೆ ಈ ಲೋಪವನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

**ಟೆಂಪೋರರಿ ಪರ್ಮಿಟ್ ಆಧಾರದ ಮೇಲೆ ಬಸ್ಸುಗಳ ಓಡಾಟ**

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೇ, ಟೆಂಪೊರರಿ ಪರ್ಮಿಟ್ ಆಧಾರದ ಮೇಲೆ ಬಸ್ಸುಗಳ ಓಡಾಟ. ಈಗ ನಮ್ಮ ರಾಜ್ಯದಲ್ಲಿ ಸಕ್ಷನ್ 80ಎ ಪ್ರಕಾರ ನಮ್ಮ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ವರು ಇದಕ್ಕೆ ಸಂಬಂಧಪಟ್ಟಿರುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಟೆಂಪೊರರಿ ಪರ್ಮಿಟ್ ಮೇಲೆ ಓಡುತ್ತಾ ಇರತಕ್ಕಂತಹ ಬಸ್ಸುಗಳ ವಿಚಾರದಲ್ಲಿ ಒಂದು ದೊಡ್ಡ ಜಾಲ ಕರ್ನಾಟಕದ ಒಳಗೆ ಇದೆ ಎನ್ನುವಂಥಾದ್ದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಾ ಇದ್ದೇನೆ. ಸುಮಾರು 1,500 ಬಸ್ಸುಗಳು ಆಂಧ್ರಪ್ರದೇಶದ ಟೆಂಪೊರರಿ ಆಧಾರದ ಮೇಲೆ ಸುಮಾರು ಒಂದೂವರೆ ಎರಡು ವರ್ಷಗಳಿಂದ ಕರ್ನಾಟಕದ ಒಳಗಡೆ ಓಡುತ್ತಾ ಇವೆ. ಇದನ್ನು ಕರ್ನಾಟಕದಲ್ಲಿ ಕಾಂಟ್ರ್ಯಾಕ್ಟ್ ಕ್ಯಾರೇಜಸ್‌ನ್ನು ಕ್ಯಾನ್ಸಲ್ ಮಾಡಿದ ದಿವಸದಿಂದ ಈ ವಿಚಾರದಲ್ಲಿ ಒಂದು ದೊಡ್ಡ ಜಾಲ ನಡೆಯುತ್ತಾ ಇದ್ದರೂ ಕೂಡ ಈ ವಿಚಾರ ಸರ್ಕಾರದ ಗಮನಕ್ಕೆ ಏಕೆ ಬಂದಿಲ್ಲ? ಎನ್ನುವಂಥದ್ದನ್ನು ಯೋಚನೆ ಮಾಡಬೇಕಾದಂಥಹ ಪರಿಸ್ಥಿತಿ ಇವತ್ತಿನ ದಿವಸ ಬಂದಿದೆ. ಕಾರಣ ಇಷ್ಟೆ, ಕರ್ನಾಟಕದ ಒಂದು ರೆಸಿಪ್ರೋಕಲ್ ಅಗ್ರಿಮೆಂಟ್ ಏನು ಇತ್ತು ಅದರಲ್ಲಿ ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶ ಈ ನಾಲ್ಕು ರಾಜ್ಯಗಳ ಮಧ್ಯೆ ಇದ್ದಂಥ ಅಗ್ರಿಮಂಟ್‌ನಿಂದ ಕರ್ನಾಟಕ ಹೊರಗೆ ಬಂದ ನಂತರ ಆಂಧ್ರಪ್ರದೇಶದಿಂದ ಸುಮಾರು 1,500 ಬಸ್‌ನವರು ಟೆಂಪೊರರಿ ಪರ್ಮಿಟನ್ನು ತೆಗೆದುಕೊಂಡು ಅಲ್ಲಿ ಟ್ಯಾಕ್ಸ್‌ನ್ನು ಕಟ್ಟಿ ನಮ್ಮ ರಾಜ್ಯದಲ್ಲಿ ಓಡಿಸುತ್ತಿದ್ದಾರೆ. ನಮ್ಮಲ್ಲಿ ಆ ಬಸ್ಸುಗಳಿಗೆ ಒಂದು ವಾರಕ್ಕೆ ಒಂದು ಸೀಟಿಗೆ 100 ರೂಪಾಯಿ ಟ್ಯಾಕ್ಸ್ ಹಾಕುವಂತಹ ಪದ್ಧತಿಯನ್ನು ನಾವು ಇಟ್ಟುಕೊಂಡಿದ್ದೇವೆ, ಆದರೆ ಇಲ್ಲಿ ಆಗಿರುವಂತಹ ಪರಿಸ್ಥಿತಿ ಎಂದರೆ ನಮ್ಮಲ್ಲಿ ಕರ್ನಾಟಕ ರಾಜ್ಯದ ಪರ್ಮಿಟ್‌ನ್ನು ಇಶ್ಯೂ ಮಾಡದೆ ಹೋದಾಗ ಆಂಧ್ರಪ್ರದೇಶ ಸರ್ಕಾರದಲ್ಲೇ ಪರ್ಮಿಟ್‌ಇಶ್ಯೂ ಆಗುತ್ತಾ ಇದೆ ಎನ್ನುವ ರೀತಿಯಲ್ಲೇ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಇವತ್ತು ಇಬ್ಬರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ಇದ್ದಾರೇನೋ ಎಂದು ನನಗೆ ಹೆದರಿಕೆ ಆಗುತ್ತಾ ಇದೆ. ಕರ್ನಾಟಕದಲ್ಲಿ ಒಬ್ಬರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಇದ್ದರೆ, ಬೆಂಗಳೂರುನಲ್ಲಿರತಕ್ಕಂತಹ ಒಂದು ಹೋಟೆಲ್ ಒಳಗಡೆ ಆಂಧ್ರಪ್ರದೇಶದ ಒಬ್ಬ ಟ್ರಾನ್ಸ್‌ಪೋರ್ಟ್ ಅಫೀಸರ್‌ಕುಳಿತು ಸುಮಾರು ಪರ್ಮಿಟ್‌ಗಳನ್ನು ಇಷ್ಯೂ ಮಾಡುತ್ತಿರುವುದು ಈ ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎನ್ನುವಂಥದ್ದನ್ನು ನಾನು ತಿಳಿಸಲಿಕ್ಕೆ ಇಚ್ಛಿಪಡುತ್ತಾ ಇದ್ದೇನೆ. ಮತ್ತು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಈ ದಾಖಲಾತಿಗಳನ್ನು ಕಳುಹಿಸಿ ಕೊಡುತ್ತಿದ್ದೇನೆ.